


**ಬಿಮ್ಮನೆ ಬೆಳೆದ ಹೂಬಿಡದ ಬಂಜೆಮರವನ್ನು ಕಡಿಯಬೇಕೆಂದು ಹೊರಟಳು. ಆದರೆ ಕತ್ತಿಯೂ ಸಹಕರಿಸಬೇಕಲ್ಲ?**

ನೇಲ್ ಪಾಲಿಷ್ ಬಳಿದ ಚೂಪಾದ ಉಗುರುಗಳ ಆಕರ್ಷಕ ಬೆರಳುಗಳು ಟೈಪರೈಟರಿನ ಗುಂಡಿಗಳ ಮೇಲೆ ಆಡಿದುವು. ಬಿಳಿಯ ಹಾಳೆಯ ಮೇಲೆ ನೀಲಿಬಣ್ಣದ ಅಕ್ಷರ ಮೂಡಿಸಿದುವು. ನಿಮಿಷಗಳಲ್ಲಿ ಹಾಳೆಯ ಅರ್ಧಭಾಗವೆಲ್ಲ ಅಕ್ಷರಗಳಿಂದ ತುಂಬಿತು.

ಕಾಗದದ ಮೇಲಿನ ಅಕ್ಷರಗಳನ್ನೇ ದಿಟ್ಟಿಸಿದಳು. ದೃಷ್ಟಿ ದಟ್ಟವಾದಂತೆ ಬೆರಳುಗಳಲ್ಲಿ ಅಸ್ಥಿರತೆ ನುಸುಳಿತು, ಕ್ರಮೇಣ ಗುಂಡಿಗಳ ಸೊಲ್ಲಡಗಿತು. ಹೆಣೆಯುತ್ತಿದ್ದ ಅಕ್ಷರಗಳ ಮಾಲೆ ತಟಸ್ಥವಾಯಿತು.

ಆಯಾಸದಿಂದ ಅವಳ ತಲೆ ಸೀಟಿಗೊರಗಿತು. ಮೇಲೆ ಸುತ್ತುತ್ತಿರುವ ಫ್ಯಾನ್ ಗಾಳಿಗೆ ಅವಳ ಮುಂಗುರುಳಿನ ಕಪ್ಪು ಗೊಂಚಲುಗಳು ಮುಖದ ಮೇಲೆ ಆಡಿದುವು. ಆ ತಂಗಾಳಿ ಅವಳ ಮೈಯ ಬಿಸಿಯನ್ನಾರಿಸಿತು. ಉಸ್ಸಪ್ಪಾ ಎನ್ನುತ್ತ ಅವಳು ಕಣ್ಣು ಮುಚ್ಚಿದಳು.

ನಿನ್ನೆ ತಾನೇ ಕಾರ್ತಿಕ್ ಆಫೀಸಿನ ಕೆಲಸದ ಮೇಲೆ ಬೆಂಗಳೂರಿಗೆ ಹೋದವನು ಮಕ್ಕಳನ್ನು ಕಂಡು ಬರುತ್ತೇನೆ, ವಾರವಾದರೂ ಆಗುತ್ತದೆಂದು ಹೇಳಿದ್ದ. ಮಕ್ಕಳಿಗಾಗಿ ರಾತ್ರಿಯೆಲ್ಲ ನಿದ್ದೆಗೆಟ್ಟು ತಿಂಡಿ ತಿನಿಸು ಮಾಡಿಕೊಟ್ಟಿದ್ದಳು. ಅವನು ಸೂಟ್ ಕೇಸ್ ಎತ್ತಿಕೊಂಡು ಹೊರಟಾಗ ಮತ್ತೊಮ್ಮೆ 'ಹೋಗಿ ಬರುವಿರಾ?' ಎಂದು ಕೇಳಿದ್ದಳು. 'ಹೂಂ' ಎನ್ನುತ್ತ ತನ್ನ ಎಂದಿನ ಕ್ಷೀಣಸ್ವರ ಹೊರಡಿಸಿ ಅವನು ಹೊರಟುಹೋಗಿದ್ದ.

ಯಾಕೆ ತನ್ನ ಬಗ್ಗೆ ಈ ಔದಾಸೀನ್ಯ ಎಂದು ಮದುವೆಯಾದ ಆರು ವರ್ಷಗಳಿಂದಲೂ ಕಾಡುತ್ತಿದ್ದ ಪ್ರಶ್ನೆ ನೆಲೆ ಸಿಕ್ಕದೆ ಅಲೆದಾಡುತ್ತಿತ್ತು. ಹಾಗಾದರೆ ಇವರಿಗೆ ತನ್ನನ್ನು